**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 2**

**ದಿಃ 21.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ವಿ ಕೆ ವಕೀಲರಿಂದಃ**

ನಾನು 1 ನೇ ಪ್ರತಿವಾದಿ ಮಗ. 1 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಒಕ್ಕಣೆಯು 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ತಯಾರಾಗಿದೆ. 1 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಹೊರ ಬರುತ್ತದೆ ಎಂಬ ಉದ್ದೇಶದಿಂದ ತಾವು ನ್ಯಾಯಾಲಯಕ್ಕೆ ಬಂದು ಅವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಹುಟ್ಟಿದ ದಿಃ 25.06.1986. ಮುತ್ತಯ್ಯನವರು ದಿಃ 08.03.1976 ರಲ್ಲಿ ಮರಣ ಶಾಸನ ಮಾಡಿದ್ದಾರೆ ಹಾಗೂ ಅದಕ್ಕಿಂತ ಮುಂಚಿತವಾಗಿ ಅಂದರೆ ದಿಃ 24.04.1974 ರಲ್ಲಿ ಒಂದು ಕ್ರಯ ಪತ್ರ ಆಗಿತ್ತು ಎಂದರೆ ಸರಿ. ಮೇಲ್ಕಂಡ ಎರಡು ವ್ಯವಹಾರಗಳು ನಾನು ಹುಟ್ಟುವುದಕ್ಕಿಂತ ಮುಂಚಿತವಾಗಿ ಆಗಿವೆ ಎಂದರೆ ಸರಿ. ಆದ ಕಾರಣ ತಮಗೆ ಮರಣ ಶಾಸನ ಪತ್ರ ಮತ್ತು ಕ್ರಯ ಪತ್ರದ ವಿಚಾರಗಳ ಬಗ್ಗೆ ತಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗಳ ಕುಟುಂಬದ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯ ಗಂಡನ ಹೆಸರು ಬೆಟ್ಟಯ್ಯ. ಬೆಟ್ಟಯ್ಯನ ತಂದೆಯ ಹೆಸರು ಚಲುವಯ್ಯ. ಚಲುವಯ್ಯರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಆದರೆ ಅವರ ಹೆಸರುಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಗಂಡು ಮಕ್ಕಳ ಹೆಸರು ಮಾತ್ರ ಗೊತ್ತು ಅವರುಗಳ ಹೆಸರು 1) ಚನ್ನಪಿಳ್ಳಯ್ಯ 2) ಬೆಟ್ಟಯ್ಯ. ಈ ದಾವೆಯಲ್ಲಿ ಸಾಕ್ಷಿದಾರರಾಗಿ ಸಾಕ್ಷ್ಯ ನುಡಿದಿರುವ ಡಿ ಡಬ್ಲ್ಯೂ 1 ನನಗೆ ಗೊತ್ತು. ಅವರು ನನ್ನ ತಾಯಿಯ ಸಹೋದರ. ನಾನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯುವ ಸಂದರ್ಭದಲ್ಲಿ ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತೇನೆ. ಈ ದಾವೆಯಲ್ಲಿ ಡಿ ಡಬ್ಲ್ಯೂ 1 ರವರು ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತು. ನಿಡಿ 7 ಪಂಚಾಯತಿ ಪಾರಿಕತ್ ನಲ್ಲಿ ಚಲುವಯ್ಯನಿಗೆ ಚನ್ನಪಿಳ್ಳಯ್ಯ ಮತ್ತು ಬೆಟ್ಟಯ್ಯ ಎಂಬ ಇಬ್ಬರು ಮಕ್ಕಳು ಎಂಬುದಾಗಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಲುವಯ್ಯನ ಹೆಣ್ಣು ಮಕ್ಕಳನ್ನು ಪಂಚಾಯತಿ ಪಾರಿಕತ್ ನಲ್ಲಿ ಕೈ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ತಾವು ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ

ಆಗಲಿ ಅಥವಾ 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯಲ್ಲಾಗಲಿ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಚಲುವಯ್ಯನವರ ತಂದೆಯ ಹೆಸರು ಚನ್ನಪ್ಪ ಆಲಿಯಾಸ್ ಚನ್ನಯ್ಯ. ಚನ್ನಪ್ಪ ಆಲಿಯಾಸ್ ಚನ್ನಯ್ಯ ನವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಚನ್ನಯ್ಯನ ಮಕ್ಕಳು ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ಯಾವಾಗ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು 1970 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ತಾವು ಯಾವ ಆಧಾರದ ಮೇರೆಗೆ ಚನ್ನಯ್ಯನ ಮಕ್ಕಳು ಅವರ ಕುಟುಂಬದ ಆಸ್ತಿಗಳನ್ನು ಯಾವ ಆಧಾರದ ಮೇರೆಗೆ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಗಳ ಆಧಾರದ ಮೇರೆಗೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವಾಗಲಿ ಅಥವಾ 6 ನೇ ಪ್ರತಿವಾದಿಯಾಗಲಿ ನ್ಯಾಯಾಲಯಕ್ಕೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಹಾಜರುಪಡಿಸಿರಬಹುದು ಅದರ ಬಗ್ಗೆ ನನಗೆ ಗೊತ್ತಿಲ್ಲ. ಯಾವ ಪಹಣಿಗಳ ಆಧಾರದ ಮೇರೆಗೆ ಚನ್ನಯ್ಯನ ಮಕ್ಕಳು ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 24.04.1972 ರ ಕ್ರಯ ಪತ್ರದ ಒಕ್ಕಣೆಯನ್ನು ತಾವು ಓದಿ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ಚಲುವಯ್ಯನವರು ಮುತ್ತಯ್ಯನವರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯ ಪತ್ರಕ್ಕೆ ಬೆಟ್ಟಯ್ಯ ಮತ್ತು ಚನ್ನಪಿಳ್ಳಯ್ಯ ನವರು ಮಾರಾಟಗಾರರು ಅಲ್ಲ ಎಂದರೆ ಸಾಕ್ಷಿಯು ಅವರ ತಂದೆಯವರು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**